ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560001.
Ph.No.080-22961016 / 22131385 E-Mail ID: registrarbcu@gmail.com

ಸಂಖ್ಯೆ: ಬಿ.ಸಿ.ಯು/ಸಿಬ್ಬಂದಿ-1&2/ /2022-23 ದಿನಾಂಕ: 08-12-2022

## ಅಧಿಸೂಚನೆ

ವಿಷಯ:- ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಮತದಾನ ಸಾಕ್ಷರತಾ ಸಂಘ (Electoral Literacy Club) ಕಾರ್ಯಚಟುವಟಿಕೆಗಳನ್ನು ಅನುಷ್ಠಾನ ಮತ್ತು ಯುವ ಮತದಾರರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡುವ ಕುರಿತು ನೋಡಲ್ ಅಧಿಕಾರಿ ನೇಮಕಾತಿ.

ಉಲ್ಲೇಖ:-
1. ಮುಖ್ಯ ಚುನಾವಣಾಧಿಕಾರಿರವರ ಕಛೇರಿ-ಕರ್ನಾಟಕ ರವರ ಸುತ್ತೋಲೆ ಸಂಖ್ಯೆ:ಸಿಆಸುಇ/132022/SVEEP/2022, ದಿನಾಂಕ: 29.06.2022 ಮತ್ತು 01.09.2022.
2. ಕುಲಪತಿಗಳ ಅನುಮೋದನೆ ದಿನಾಂಕ: 08.12.2022.

ಮೇಲ್ಕಂಡ ವಿಷಯ ಮತ್ತು ಉಲ್ಲೇಖ(1)ಕ್ಕೆ ಸಂಬಂಧಿಸಿದಂತೆ, ಭಾರತ ಚುನಾವಣಾ ಆಯೋಗದ ಆದೇಶ ಹಾಗೂ ಮಾರ್ಗಸೂಚಿಗಳನ್ವಯ ಮತದಾರ ಸಾಕ್ಷರತಾ ಸಂಘ (Electoral Literacy Club) ಗಳನ್ನು ಪ್ರಾರಂಭಿಸಿ ಯುವ ಮತದಾರರಲ್ಲಿ ಮತದಾನದ ಅರಿವು, ಮತದಾನದ ನೊಂದಣಿ ಮತ್ತು ಹಕ್ಕಿನ ಬಗ್ಗೆ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಹೆಚ್ಚಿನ ಅರಿವು ಮೂಡಿಸುವ ಸಂಬಂಧ ವಿಶ್ವವಿದ್ಯಾನಿಲಯದಲ್ಲಿ ಮತದಾರ ಸಾಕ್ಷರತಾ ಸಂಘ (Electoral Literacy Club) ರಚಿಸಲು ಹಾಗೂ ಈ ಸಮಿತಿಯ ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಲು ಡಾ. ಎಸ್. ಹರಿಪ್ರಸಾದ್, ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ರಸಾಯನಶಾಸ್ತ್ರ ವಿಭಾಗ (ಮೊ: 94480 16944) ಅವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಿ ಆದೇಶಿಸಿಲಾಗಿದೆ.

ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರು ಹಾಗೂ ಎಲ್ಲಾ ಸಂಯೋಜಿತ/ಸ್ವಾಯತ್ತ ಕಾಲೇಜುಗಳ ಪ್ರಾಂಶುಪಾಲರೊಂದಿಗೆ ಭಾರತ ಚುನಾವಣಾ ಆಯೋಗದ ಆದೇಶ ಹಾಗೂ ಮಾರ್ಗಸೂಚಿಗಳನ್ವಯ ಮತದಾರ ಸಾಕ್ಷರತಾ ಸಂಘದ ಪೂರ್ವಸಿದ್ಧತೆ ಕೈಗೊಳ್ಳಲು ಸೂಚಿಸಿದೆ.

Lokesh.v
ಕುಲಸಚಿವರು

ಗೆ,
ಡಾ. ಎಸ್. ಹರಿಪ್ರಸಾದ್,
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ರಸಾಯನಶಾಸ್ತ್ರ ವಿಭಾಗ
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು.

ಪ್ರತಿಗಳು:
1. ಕುಲಪತಿಗಳು/ಕುಲಸಚಿವರು/ಕುಲಸಚಿವರು (ಮೌಲ್ಯಮಾಪನ)/ವಿತ್ತಾಧಿಕಾರಿಗಳ ರವರ ಆಪ್ತ-ಸಹಾಯಕರು, ಬೆಂ.ನ.ವಿ.ವಿ., ಬೆಂಗಳೂರು.
2. ವಿಶ್ವವಿದ್ಯಾನಿಲಯ ಜಾಲತಾಣದಲ್ಲಿ ಪ್ರಕಟಿಸಲು.
3. ಕಛೇರಿ ಪ್ರತಿ/ ರಕ್ಷಾ ಕಡತ.

# ಮುಖ್ಯ ಚುನಾವಣಾಧಿಕಾರಿಯವರ ಕಚೇರಿ, ಕರ್ನಾಟಕ

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು–560 001.

---

**ಸಂಖ್ಯೆ:** ಸಿಇಸುಇ/13/SVEEP/2022 **ದಿನಾಂಕ:** 29ನೇ ಜೂನ್ 2022

## ಸುತ್ತೋಲೆ

ವಿಷಯ:– 2022–23ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಶಾಲೆ, ಕಾಲೇಜುಗಳಲ್ಲಿ ಮತದಾರ ಸಾಕ್ಷರತಾ ಸಂಘ (Electoral Literacy Clubs) ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ:– 1) ಇದೇ ಕ್ರಮಾಂಕದ ಕಡತ, ಕಂಡಿಕೆ– (6) ರಲ್ಲಿ ಮಾನ್ಯ ಮುಖ್ಯ ಚುನಾವಣಾಧಿಕಾರಿಯವರು ಅನುಮೋದಿಸಿರುವಂತೆ.

– – –

ಭಾರತ ಚುನಾವಣಾ ಆಯೋಗವು ನೂತನ ಮತ್ತು ಭವಿಷ್ಯದ ಯುವ ಮತದಾರರಲ್ಲಿ ಚುನಾವಣೆ ಮತ್ತು ಮತದಾನ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಜಾಗೃತಿ ಮೂಡಿಸುವ ಸಲುವಾಗಿ ವಿಶ್ವವಿದ್ಯಾಲಯಗಳು ಸೇರಿದಂತೆ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿ **"ಮತದಾರ ಸಾಕ್ಷರತಾ ಸಂಘ"** [Electoral Literacy Clubs] ಗಳನ್ನು ಹಾಗೂ ಪ್ರತಿ ವಿಧಾನಸಭಾ ಕ್ಷೇತ್ರದ ಮತಗಟ್ಟೆ ಕೇಂದ್ರಗಳಲ್ಲಿ ಚುನಾವಣಾ ಪಾಠಶಾಲೆ [ಚುನಾವಣಾ ಜಾಗೃತಿ ಸಂಘ] ಗಳನ್ನು ಸ್ಥಾಪಿಸಿ, ಸೂಚಿತ ಮಾರ್ಗದರ್ಶಿಗಳನ್ವಯ ಕಾರ್ಯಚುಟವಟಿಕೆಗಳನ್ನು ಅನುಷ್ಠಾನಗೊಳಿಸಲು ಈಗಾಗಲೇ ನಿರ್ದೇಶಿಸಲಾಗಿದೆ.

ಪೂರ್ವಭಾವಿಯಾಗಿ ರಾಜ್ಯ ಮಟ್ಟದಿಂದ ಬ್ಲಾಕ್ ಹಂತದವರೆಗೆ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ [ಡಯಟ್] ಗಳ ಉಸ್ತುವಾರಿಯಲ್ಲಿ ಕ್ಯಾಸ್ಕೆಡ್ ಮಾದರಿಯಲ್ಲಿ ಸಂಪನ್ಮೂಲ ವ್ಯಕ್ತಿಗಳು ಹಾಗೂ ಇ.ಎಲ್.ಸಿ/ಸಿ.ಜೆ.ಸಿ ಸಂಚಾಲಕರು/ಬಿ.ಎಲ್.ಓಗಳಿಗೆ ತರಬೇತಿಯನ್ನು ನೀಡಲಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ಪೂರಕವಾಗಿ ಭಾರತ ಚುನಾವಣಾ ಆಯೋಗದಿಂದ ರಚಿತವಾದ **"ಇ.ಎಲ್.ಸಿ. ಸಂಪನ್ಮೂಲ ಮಾರ್ಗದರ್ಶಿ"** ಸಾಹಿತ್ಯ ಸಾಮಗ್ರಿಗಳನ್ನು ಕನ್ನಡಕ್ಕೆ ಭಾಷಾಂತರಿಸಿ, ಎಲ್ಲಾ ಇ.ಎಲ್.ಸಿ ಕೇಂದ್ರಗಳಿಗೆ 2018–19 ನೇ ಸಾಲಿನಲ್ಲಿ ಸರಬರಾಜು ಮಾಡಲಾಗಿದೆ. ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳ ಮಾರ್ಗದರ್ಶನ ಹಾಗೂ ಡಯಟ್‌ಗಳ ಉಸ್ತುವಾರಿಯಲ್ಲಿ ಸೂಚಿತ ಕಾರ್ಯಚಟುವಟಿಕೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

ಪ್ರಸಕ್ತ 2022–23ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಶೈಕ್ಷಣಿಕ ಸಂಸ್ಥೆಗಳು ಇ.ಎಲ್.ಸಿ/ಸಿ.ಜೆ.ಸಿ ಕೇಂದ್ರಗಳ ಮೂಲಕ ಸಂಪನ್ಮೂಲ ಸಾಹಿತ್ಯದ ಮಾರ್ಗಸೂಚಿಗಳನ್ವಯ ತರಗತಿ/ಮಾಹೆವಾರು ಸೂಚಿತ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸುವುದು ಅಗತ್ಯವಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ, ಅನುಬಂಧ 1 ಮತ್ತು 2ರಲ್ಲಿ ವಿವರವಾದ ಮಾಹಿತಿಯನ್ನು ಒದಗಿಸಲಾಗಿರುತ್ತದೆ.

## 2022–23 ನೇ ಸಾಲಿಗೆ ಅನುಷ್ಠಾನಗೊಳಿಸಬೇಕಾದ ಕಾರ್ಯಚಟುವಟಿಕೆಗಳ ವಿವರ

**1. ಇ.ಎಲ್.ಸಿ. ಕೇಂದ್ರಗಳ ಸ್ಥಾಪನೆ ಹಾಗೂ ಅರ್ಹ ಸದಸ್ಯರುಗಳ ನೋಂದಣಿ ಪ್ರಕ್ರಿಯೆ:–**

(ಅ) 2022–23ನೇ ಸಾಲಿಗೆ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತದಾರ ಸಾಕ್ಷರತಾ ಸಂಘಗಳನ್ನು [ಇಎಲ್.ಸಿ] ಕಡ್ಡಾಯವಾಗಿ ಪ್ರಾರಂಭಿಸುವುದು.

(ಆ) ಭಾರತ ಚುನಾವಣಾ ಆಯೋಗದ [ಇ.ಸಿ.ಐ] ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ನೋಂದಣಿ ಮಾಡುವುದು. (www.ecisveep.nic.in/clubs)

(ಇ) ಪ್ರೌಢಶಾಲೆ 9ನೇ ತರಗತಿ ಹಾಗೂ ಮೇಲ್ಪಟ್ಟ ಎಲ್ಲಾ ಹಂತದ ವಿದ್ಯಾರ್ಥಿಗಳನ್ನು ಆಯಾ ಇ.ಎಲ್.ಸಿ.ಕೇಂದ್ರದ ಸದಸ್ಯರನ್ನಾಗಿ ನಿಗದಿತ ನಮೂನೆಯ ಅನ್ವಯ ನೋಂದಾಯಿಸುವುದು.

(ಈ) 2022–23ನೇ ಸಾಲಿನಲ್ಲಿ ಈಗಾಗಲೇ ಇ.ಎಲ್.ಸಿ. ಪ್ರಾರಂಭಿಸಿದ್ದಲ್ಲಿ, ಅಂತಹ ಇ.ಎಲ್.ಸಿ ಕೇಂದ್ರಗಳಲ್ಲಿಯೂ ವಿದ್ಯಾರ್ಥಿಗಳ ನೋಂದಣಿ ಮಾಡಿಸುವುದು.

**2. ಇ.ಎಲ್.ಸಿ/ಸಿ.ಜೆ.ಸಿ ಸಂಚಾಲಕರ ತರಬೇತಿ ಕಾರ್ಯಕ್ರಮ:–**

(ಅ) 2022–23ನೇ ಸಾಲಿನಲ್ಲಿ ಎಲ್ಲಾ ಇ.ಎಲ್.ಸಿ/ಸಿ.ಜೆ.ಸಿ ಸಂಚಾಲಕರು/ ಬಿ.ಎಲ್.ಓಗಳಿಗೆ ತರಬೇತಿಯನ್ನು ನೀಡಲು ಸೂಚಿಸಲಾಗಿತ್ತು. ಆದರೆ ಕೆಲವು ಕಡೆ ವಿವಿಧ ಕಾರಣಗಳಿಂದ ಪೂರ್ಣ ಪ್ರಮಾಣದಲ್ಲಿ ನೀಡಲು ಸಾಧ್ಯವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಬ್ಲಾಕ್ ಮತ್ತು ಜಿಲ್ಲೆಗಳಲ್ಲಿ ತರಬೇತಿ ಪಡೆಯದಿರುವ ಸಂಚಾಲಕರು ಬಿಎಲ್‌ಓಗಳಿಗೆ ತರಬೇತಿಯನ್ನು ಆಯಾ ಹಂತದಲ್ಲಿ ಆಯೋಜಿಸಿ ಪೂರ್ಣಗೊಳಿಸಲು ಅಗತ್ಯ ಕ್ರಮವಹಿಸುವುದು.

(ಆ) ಹೊಸದಾಗಿ ಪ್ರಾರಂಭಿಸಲಾದ ಇ.ಎಲ್.ಸಿ/ಸಿ.ಜೆ.ಸಿ ಕೇಂದ್ರಗಳ ಸಂಚಾಲಕರು ಮತ್ತು ಬಿಎಲ್‌ಓಗಳಿಗೂ ಸಹ ತರಬೇತಿಯನ್ನು ನೀಡುವುದು.

**3. ಸಂಪನ್ಮೂಲ ಮಾರ್ಗದರ್ಶಿ ಸಾಹಿತ್ಯ ಪೂರೈಕೆ:–**

(ಅ) 2022–23ನೇ ಸಾಲಿನಲ್ಲಿ ಈಗಾಗಲೇ ಎಲ್ಲಾ ಇ.ಎಲ್.ಸಿ/ಸಿ.ಜೆ.ಸಿ ಕೇಂದ್ರಗಳಿಗೆ ಸಂಪನ್ಮೂಲ ಮಾರ್ಗದರ್ಶಿ ಸಾಹಿತ್ಯಗಳನ್ನು [ಕನ್ನಡ ಆವೃತ್ತಿ] ಸರಬರಾಜು ಮಾಡಲಾಗಿರುತ್ತದೆ.

(ಆ) ಜಿಲ್ಲಾ ಸ್ವೀಪ್ ನೋಡಲ್ ಅಧಿಕಾರಿಗಳು, ಆಯಾ ಉಪನಿರ್ದೇಶಕರುಗಳು ಹಾಗೂ ಬಿ.ಎಲ್.ಎಂ.ಟಿ/ ಡಿ.ಎಲ್.ಎಂ.ಟಿಗಳು ಇವುಗಳ ಸಂರಕ್ಷಣೆ ಹಾಗೂ ಬಳಕೆಯ ಬಗ್ಗೆ ಪರಿಶೀಲಿಸಿ ಖಾತರಿಪಡಿಸಿಕೊಳ್ಳುವುದು.

**4. ಇ.ಎಲ್.ಸಿ/ಸಿ.ಜೆ.ಸಿ ಕಾರ್ಯಚಟುವಟಿಕೆಗಳ ಅನುಷ್ಠಾನ:–**

(ಅ) ತರಗತಿವಾರು ಆಯಾ ಮಾಹೆಗಳಲ್ಲಿ ಸೂಚಿತ ಕಾರ್ಯಚಟುವಟಿಕೆಗಳನ್ನು ಆಯಾ ಕೇಂದ್ರಗಳ ಸಂಚಾಲಕರ ನೇತೃತ್ವದಲ್ಲಿ ನಿರ್ವಹಿಸತಕ್ಕದ್ದು. ವಿವರಗಳನ್ನು ಇದರೊಂದಿಗೆ ಲಗತ್ತಿಸಿರುವ **ಅನುಬಂಧ–1** ರಲ್ಲಿ ವಿವರಿಸಲಾಗಿದೆ.

(ಆ) ಇದಕ್ಕೆ ಸಂಬಂಧಿಸಿದಂತೆ ಅಗತ್ಯ ಮಾರ್ಗದರ್ಶನವನ್ನು ಆಯಾ ಬ್ಲಾಕ್/ಜಿಲ್ಲೆಯ ಸಂಪನ್ಮೂಲ ವ್ಯಕ್ತಿಗಳು [ಬಿ.ಎಲ್.ಎಂ.ಟಿ/ ಡಿ.ಎಲ್.ಎಂ.ಟಿ] ನೀಡುವುದು ಹಾಗೂ ಅನುಪಾಲನೆ ಮಾಡುವುದು.

**5. ರಾಷ್ಟ್ರೀಯ ಮತದಾರ ದಿನ [National Voters' Day] ಆಚರಣೆ:–**

(ಅ) ನಮ್ಮ ದೇಶವು ವಿಶ್ವದಲ್ಲಿಯೇ ಅತ್ಯಂತ ಬೃಹತ್ ಪ್ರಜಾಸತ್ತಾತ್ಮಕ ರಾಷ್ಟ್ರವಾಗಿದ್ದು, ಚುನಾವಣೆ ಮತ್ತು ಮತದಾನ ಪ್ರಕ್ರಿಯೆಗಳು ಜನಪ್ರತಿನಿಧಿಗಳ ಮೂಲಕ ಪ್ರಜೆಗಳೇ ಸರ್ಕಾರವನ್ನು ರಚಿಸುವ ವಿಶಿಷ್ಟ ಅಧಿಕಾರವನ್ನು ಜನತೆಗೆ ನೀಡಿದೆ.

(ಆ) ಭಾರತ ಚುನಾವಣಾ ಆಯೋಗದ ಸ್ಥಾಪನೆಯ ಸ್ಮರಣಾರ್ಥವಾಗಿ ಪ್ರತಿ ವರ್ಷ ಜನವರಿ 25, ರಾಷ್ಟ್ರಾದ್ಯಂತ ರಾಷ್ಟ್ರೀಯ ಮತದಾರ ದಿನವನ್ನು [NVD] ಪ್ರಜಾಪ್ರಭುತ್ವದ ಹಬ್ಬವಾಗಿ ಆಚರಿಸಲಾಗುತ್ತಿದೆ. ಈ ಕಾರ್ಯಕ್ರಮದ ಅಂಗವಾಗಿ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಶೈಕ್ಷಣಿಕ ಸಂಸ್ಥೆಗಳ ಇ.ಎಲ್.ಸಿ/ಸಿ.ಜೆ.ಸಿ ಕೇಂದ್ರಗಳಲ್ಲಿ ಹಾಗೂ ಬ್ಲಾಕ್ ಮತ್ತು ಜಿಲ್ಲಾ ಹಂತಗಳಲ್ಲಿ ಸಂಪನ್ಮೂಲ ಸಾಹಿತ್ಯ ಮಾರ್ಗದರ್ಶನದಲ್ಲಿ ಸೂಚಿಸಲಾಗಿರುವ ವಿಷಯಗಳ ಆಧಾರದಲ್ಲಿ ಹಾಗೂ ಈ ಕಛೇರಿ ತಿಳಿಸಿದಂತೆ ಸ್ಪರ್ಧೆಗಳನ್ನು ಆಯೋಜಿಸಲು ಅಗತ್ಯ ಕ್ರಮವಹಿಸುವುದು.

6. **ಸ್ಪರ್ಧೆಗಳ ಆಯೋಜನೆ:–**

ಪ್ರೌಢಶಾಲಾ, ಪದವಿ ಪೂರ್ವ/ ತತ್ಸಮಾನ/, ಚಿತ್ರಕಲಾ, ಎಲ್ಲಾ ಪದವಿ, ತಾಂತ್ರಿಕ ಪದವಿ, ವೈದ್ಯಕೀಯ ಪದವಿ ವಿದ್ಯಾಲಯಗಳಲ್ಲಿ ಹಾಗೂ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಏರ್ಪಡಿಸಬೇಕಾಗಿರುವ ಸ್ಪರ್ದೆಗಳ ವಿವರಗಳನ್ನು ಅನುಬಂಧ–02ರಲ್ಲಿ ಒದಗಿಸಿದೆ. ಪ್ರತಿಯೊಂದು ಸ್ಪರ್ದೆಯಲ್ಲಿ ವಿವಿಧ ಹಂತದಲ್ಲಿ ಆಯ್ಕೆಮಾಡಬೇಕಾದ ಕ್ರಮ ಈ ಕೆಳಕಂಡಂತಿದೆ.

**(I) ನಾಟಕ ಸ್ಪರ್ಧೆ:**

(ಅ) ಚುನಾವಣಾ ಆಯೋಗದಿಂದ ಒದಗಿಸಲಾಗಿರುವ **"ಓಟು ಹಾಕೋಣ ಬನ್ನಿ"** ನಾಟಕ ಪುಸ್ತಕ ಆಧಾರಿತ ನಾಟಕಗಳನ್ನು ಪ್ರದರ್ಶಿಸುವುದು. ಶಾಲೆ/ಸಂಸ್ಥಾ ಹಂತದಲ್ಲಿ ಆಯಾ ಇಎಲ್‌ಸಿ ಕೇಂದ್ರಗಳು ಆಯೋಜಿಸುವುದು.

**(II) ಕ್ವಿಜ್ (ರಸಪ್ರಶ್ನೆ) ಸ್ಪರ್ಧೆ:**

(ಅ) ಈ ಸ್ಪರ್ಧೆಯಲ್ಲಿ ಆಯ್ಕೆಯಾದ ಮೂರು ವಿಜೇತ ತಂಡಗಳ (ಪ್ರಥಮ, ದ್ವಿತೀಯ ಮತ್ತು ತೃತೀಯ) ಪಟ್ಟಿಯನ್ನು ಬ್ಲಾಕ್ ಹಂತಕ್ಕೆ ಸಲ್ಲಿಸುವುದು. ಈ ಪೈಕಿ ಪ್ರಥಮ ಸ್ಥಾನ ಪಡೆದ ತಂಡವನ್ನು ಬ್ಲಾಕ್ ಹಂತದ ಸ್ಪರ್ಧೆಗೆ ಆಯ್ಕೆ ಮಾಡುವುದು. ಇದೇ ಮಾದರಿಯಲ್ಲಿ **ಬ್ಲಾಕ್ ಹಂತದಲ್ಲಿ** ಸ್ಪರ್ಧೆಯನ್ನು ನಡೆಸಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಗಳಿಸಿದ ವಿಜೇತ ತಂಡಗಳ ಪಟ್ಟಿಯನ್ನು **ಜಿಲ್ಲಾ ಹಂತಕ್ಕೆ** ಸಲ್ಲಿಸುವುದು. ಜಿಲ್ಲಾ ಹಂತದ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನದಲ್ಲಿ ವಿಜೇತರಾದ ಸ್ಪರ್ಧಿಗಳಿಗೆ **ರಾಜ್ಯ ಹಂತ**ದಲ್ಲಿ ಸ್ಪರ್ಧೆಗಳನ್ನು ನಡೆಸಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳಿಗೆ ವಿಜೇತರನ್ನು ಆಯ್ಕೆ ಮಾಡಲಾಗುವುದು.

**(III) ಚರ್ಚಾಸ್ಪರ್ಧೆಗಳು:–**

(ಅ) ಈ ಸ್ಪರ್ಧೆಯಲ್ಲಿ ಆಯ್ಕೆಯಾದ ಮೂರು ವಿಜೇತ ತಂಡಗಳ (ಪ್ರಥಮ, ದ್ವಿತೀಯ ಮತ್ತು ತೃತೀಯ) ಪಟ್ಟಿಯನ್ನು ಬ್ಲಾಕ್ ಹಂತಕ್ಕೆ ಸಲ್ಲಿಸುವುದು. ಈ ಪೈಕಿ ಪ್ರಥಮ ಸ್ಥಾನ ಪಡೆದ ತಂಡವನ್ನು ಬ್ಲಾಕ್ ಹಂತದ ಸ್ಪರ್ಧೆಗೆ ಆಯ್ಕೆ ಮಾಡುವುದು.

(ಆ) ಇದೇ ಮಾದರಿಯಲ್ಲಿ **ಬ್ಲಾಕ್ ಹಂತದಲ್ಲಿ** ಸ್ಪರ್ಧೆಯನ್ನು ನಡೆಸಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಗಳಿಸಿದ ವಿಜೇತ ತಂಡಗಳ ಪಟ್ಟಿಯನ್ನು **ಜಿಲ್ಲಾ ಹಂತಕ್ಕೆ** ಸಲ್ಲಿಸುವುದು.

**(IV) ಇತರೆ ಸ್ಪರ್ಧೆಗಳು: ಪ್ರಬಂಧ, ಚಿತ್ರಕಲೆ ಮತ್ತು ಪೋಸ್ಟರ್ ಮೇಕಿಂಗ್,**

(ಅ) ಆಯಾ ತರಗತಿಗಳಿಗೆ ನಿಗದಿಪಡಿಸಿರುವಂತೆ ಪ್ರತಿ ಸ್ಪರ್ಧೆಯನ್ನು ಶಾಲೆ/ಸಂಸ್ಥಾ ಹಂತದಲ್ಲಿ ಆಯಾ ಇಎಲ್‌ಸಿ ಕೇಂದ್ರಗಳು ಆಯೋಜಿಸುವುದು.

(ಆ) ಈ ಮೇಲ್ಕಂಡ ಸ್ಪರ್ಧೆಯಲ್ಲಿ ಆಯ್ಕೆಯಾದ ಮೂರು ಸ್ಥಾನಗಳ (ಪ್ರಥಮ, ದ್ವಿತೀಯ ಮತ್ತು ತೃತೀಯ) ಪಟ್ಟಿಯನ್ನು ಬ್ಲಾಕ್ ಹಂತಕ್ಕೆ ಸಲ್ಲಿಸುವುದು. ಈ ಪೈಕಿ ಪ್ರಥಮ ಸ್ಥಾನ ಪಡೆದ ವಿಜೇತರನ್ನು ಬ್ಲಾಕ್ ಹಂತದ ಸ್ಪರ್ಧೆಗೆ ಆಯ್ಕೆ ಮಾಡುವುದು.

(ಇ) ಇದೇ ಮಾದರಿಯಲ್ಲಿ ಬ್ಲಾಕ್ ಹಂತದಲ್ಲಿ ಸ್ಪರ್ಧೆಯನ್ನು ನಡೆಸಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಗಳಿಸಿದ ವಿಜೇತರ ಪಟ್ಟಿಯನ್ನು ಜಿಲ್ಲಾ ಹಂತಕ್ಕೆ ಸಲ್ಲಿಸುವುದು. ಈ ಪೈಕಿ ಬ್ಲಾಕ್ ಹಂತದಲ್ಲಿ ಪ್ರಥಮ ಸ್ಥಾನ ಪಡೆದ ವಿಜೇತರನ್ನು ಜಿಲ್ಲಾ ಹಂತದ ಸ್ಪರ್ಧೆಗೆ ಆಯ್ಕೆ ಮಾಡುವುದು.

(ಈ) ಇದೇ ಮಾದರಿಯಲ್ಲಿ ಜಿಲ್ಲಾ ಹಂತದಲ್ಲಿ ಸ್ಪರ್ಧೆಯನ್ನು ನಡೆಸಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಗಳಿಸಿದ ವಿಜೇತರ ಪಟ್ಟಿಯನ್ನು ರಾಜ್ಯ ಹಂತಕ್ಕೆ ಸಲ್ಲಿಸುವುದು.

(ಉ) ಜಿಲ್ಲಾ ಹಂತದ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನದಲ್ಲಿ ವಿಜೇತರಾದ ಸ್ಪರ್ಧಿಗಳಿಗೆ ರಾಜ್ಯ ಹಂತದಲ್ಲಿ ಸ್ಪರ್ಧೆಗಳನ್ನು ನಡೆಸಿ, ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳಿಗೆ ವಿಜೇತರನ್ನು ಆಯ್ಕೆ ಮಾಡಲಾಗುವುದು.

**7. ಅತ್ಯುತ್ತಮ ಇಎಲ್‌ಸಿ ಪುರಸ್ಕಾರ:–**

ಇ.ಎಲ್.ಸಿ ಸೂಚಿತ ಕಾರ್ಯಚಟುವಟಿಕೆಗಳ ಪರಿಣಾಮಕಾರಿ ಅನುಷ್ಠಾನ, ಅನುಪಾಲನೆ ಹಾಗೂ ಉತ್ತಮ ಆಚರಣೆಗಳು, ಯಶೋಗಾಥೆಗಳು ಮತ್ತು ವಿಶೇಷವಾಗಿ ನೂತನ ಮತದಾರರ ನೋಂದಣಿ ಪ್ರಕ್ರಿಯೆಗಳನ್ನು ಒಳಗೊಂಡ ಮಾನದಂಡಗಳ ಅನ್ವಯ ಪ್ರತಿ ಬ್ಲಾಕ್, ಜಿಲ್ಲೆ, ವಿಭಾಗಗಳಲ್ಲಿ ತಲಾ ಮೂರರಂತೆ ಅತ್ಯುತ್ತಮ ಇಎಲ್‌ಸಿ ಕೇಂದ್ರಗಳನ್ನು ಆಯ್ಕೆ ಮಾಡಲಾಗುವುದು. ರಾಜ್ಯ ಮಟ್ಟದಲ್ಲಿ ಪ್ರೌಢಶಾಲೆ, ಪದವಿಪೂರ್ವ ತತ್ಸಮಾನ, ಪದವಿ ಹಂತಗಳಿಗೆ ಪ್ರತ್ಯೇಕವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳಿಗೆ ಆಯ್ಕೆ ಮಾಡಿ, ಪ್ರಶಸ್ತಿಪತ್ರಗಳೊಂದಿಗೆ **"ರಾಷ್ಟ್ರೀಯ ಮತದಾರ ದಿನದಂದು"** ಸೂಕ್ತ ಪುರಸ್ಕಾರಗಳನ್ನು ನೀಡಲಾಗುವುದು.

**8. ಕಾರ್ಯಕ್ರಮಗಳ ಉಸ್ತುವಾರಿ ಮತ್ತು ಮೇಲ್ವಿಚಾರಣೆ:–**

(ಅ) ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು ಈ ಕಾರ್ಯಕ್ರಮದ ಸಂಪೂರ್ಣ ಮೇಲ್ವಿಚಾರಣೆ ಹಾಗೂ ಮಾರ್ಗದರ್ಶನ ಮಾಡುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

(ಆ) ಸ್ವೀಪ್ ಕಾರ್ಯಕ್ರಮದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ತಮ್ಮ ತಮ್ಮ ವ್ಯಾಪ್ತಿಯ ಈ ಕೆಳಕಂಡ ಅಧಿಕಾರಿಗಳ ಸಭೆಯನ್ನು ಏರ್ಪಡಿಸಿ ಸೂಕ್ತ ಮಾರ್ಗದರ್ಶನ ನೀಡುವ ಮುಖೇನ ಮೇಲ್ವಿಚಾರಣೆಯನ್ನು ಕೈಗೊಳ್ಳುವುದು.

1) ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಆಡಳಿತ),
2) ಪ್ರಾಂಶುಪಾಲರು ಹಾಗೂ ಪದನಿಮಿತ್ತ ಜಿಲ್ಲಾ ಉಪನಿರ್ದೇಶಕರು [ಅಭಿವೃದ್ಧಿ],
3) ಉಪನಿರ್ದೇಶಕರು [ಪದವಿ ಪೂರ್ವ],
4) ಕೇಂದ್ರಸ್ಥಾನದಲ್ಲಿರುವ ಎಲ್ಲಾ ಪದವಿ, ತಾಂತ್ರಿಕ ಪದವಿ, ವೈದ್ಯಕೀಯ ಪದವಿ/ತತ್ಸಮಾನ ಕಾಲೇಜಿನ ಪ್ರಾಂಶುಪಾಲರು,
5) ಪ್ರತಿ ವಿಶ್ವವಿದ್ಯಾಲಯಗಳ ರಾಜ್ಯಶಾಸ್ತ್ರ/ಮಾನವಿಕ ವಿಜ್ಞಾನ ವಿಭಾಗದ ಮುಖ್ಯಸ್ಥರು.

(ಇ) ಉಪನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು [ಅಭಿವೃದ್ಧಿ] ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ತಮ್ಮ ತಮ್ಮ ವ್ಯಾಪ್ತಿಯ ಈ ಕೆಳಕಂಡ ಎಲ್ಲಾ ಹಂತದ ಉಸ್ತುವಾರಿ ಅಧಿಕಾರಿಗಳಿಗೆ ಜವಾಬ್ದಾರಿಗಳನ್ನು ನಿಗದಿಪಡಿಸಿ, ಇ.ಎಲ್.ಸಿ/ಸಿ.ಜೆ.ಸಿ ಸಂಚಾಲಕರಿಗೆ ಮೇಲ್ಕಂಡ ಸ್ಪರ್ದೆಗಳ ಬಗ್ಗೆ ಸೂಕ್ತ ಮಾರ್ಗದರ್ಶನ ಮತ್ತು ತರಬೇತಿಯನ್ನು ನೀಡುವುದು.

1) ಕ್ಷೇತ್ರ ಶಿಕ್ಷಣಾಧಿಕಾರಿಗಳು,
2) ಡಯಟ್ ಹಿರಿಯ ಉಪನ್ಯಾಸಕರು,
3) ಶಿಕ್ಷಣಾಧಿಕಾರಿಗಳು,
4) ಉಪಸಮನ್ವಯಾಧಿಕಾರಿಗಳು,
5) ಸಹಾಯಕ ಸಮನ್ವಯಾಧಿಕಾರಿಗಳು,
6) ಕ್ಷೇತ್ರ ಸಮನ್ವಯಾಧಿಕಾರಿಗಳು,

7) ಡಯಟ್ ಉಪನ್ಯಾಸಕರು,

6) ವಿಷಯ ಪರಿವೀಕ್ಷಕರು

7) ಬಿ.ಎಲ್.ಎಂ.ಟಿ/ಡಿ.ಎಲ್.ಎಂ.ಟಿಗಳು ಸೇರಿದಂತೆ

(ಈ) ಉಪನಿರ್ದೇಶಕರು [ಪದವಿ ಪೂರ್ವ ಶಿಕ್ಷಣ ಇಲಾಖೆ] ಇವರು ತಮ್ಮ ಜಿಲ್ಲೆಯ ಪದವಿ ಪೂರ್ವ/ತತ್ಸಮಾನ ಕಾಲೇಜುಗಳ ಪ್ರಾಂಶುಪಾಲರಿಗೆ ಮೇಲ್ಕಂಡ ಸ್ಪರ್ದೆಗಳ ಬಗ್ಗೆ ಸೂಕ್ತ ಮಾರ್ಗದರ್ಶನ ಮತ್ತು ತರಬೇತಿಯನ್ನು ನೀಡುವುದು.

(ಉ) ತಹಸೀಲ್ದಾರರು ಚುನಾವಣಾ ಜಾಗೃತಿ ಸಂಬಂಧ ಮತಗಟ್ಟೆ ಕೇಂದ್ರಗಳಲ್ಲಿ ಈ ಕೆಳಕಂಡ ಕ್ರಮಗಳನ್ನು ಜರುಗಿಸುವುದು.

I. ಚುನಾವಣಾ ಜಾಗೃತಿ ಸಂಘಗಳನ್ನು ಪ್ರಾರಂಭಿಸುವುದು. ಆಯಾ ಸಂಚಾಲಕರು /ಬಿಎಲ್‌ಓಗಳಿಗೆ ತರಬೇತಿ ನೀಡಿರುವುದನ್ನು ಖಾತರಿ ಪಡಿಸಿಕೊಳ್ಳುವುದು.

II. ಪೂರ್ಣಪ್ರಮಾಣದ ಯಶಸ್ಸಿಗಾಗಿ 2022-23ನೇ ಸಾಲಿನಲ್ಲಿ ತಮ್ಮ ವ್ಯಾಪ್ತಿಯಲ್ಲಿನ ಎಲ್ಲಾ ಮತಗಟ್ಟೆ ಕೇಂದ್ರಗಳಲ್ಲಿ ಚುನಾವಣಾ ಜಾಗೃತಿ ಸಂಘಗಳನ್ನು ಪ್ರಾರಂಭಿಸುವುದು. ಆಯಾ ಬಿ.ಎಲ್.ಓ.ಗಳನ್ನು ಸಂಚಾಲಕರನ್ನಾಗಿ ನೇಮಕ ಮಾಡಿ, ಸಂಪನ್ಮೂಲ ಮಾರ್ಗದರ್ಶಿಯನ್ವಯ ಅಗತ್ಯ ತರಬೇತಿ ನೀಡಲು ಕ್ರಮವಹಿಸುವುದು.

III. ಸಿಜೆಸಿ ಸಂಚಾಲಕರಾದ ಬಿ.ಎಲ್.ಓಗಳಿಗೆ ಚುನಾವಣಾ ಜಾಗೃತಿ ಸಂಘಗಳನ್ನು ಭಾರತ ಚುನಾವಣಾ ಆಯೋಗದ ಅಂತರ್ಜಾಲದಲ್ಲಿ ನೋಂದಾಯಿಸಿ ಕಾಲಕಾಲಕ್ಕೆ ಸೂಚಿತ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳುವುದು.

IV. ಡಯಟ್ ಮೂಲಕ ನೀಡುವ ತರಬೇತಿ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಶೇಕಡ 100ರಷ್ಟು ಹಾಜರಾಗಲು ಹಾಗೂ ತದನಂತರ ಅನುಷ್ಠಾನಗೊಳಿಸಲು ಸೂಕ್ತ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ನೀಡುವುದು.

(ಊ) ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಾಸಿಕ ಸಭೆಯಲ್ಲಿ ಕ್ಷೇತ್ರ ಸಮನ್ವಯಾಧಿಕಾರಿಗಳು, ಪ್ರೌಢಶಾಲಾ ಮುಖ್ಯೋಪಾಧ್ಯಾಯರು, ಇ.ಎಲ್.ಸಿ. ಸಂಚಾಲಕರು, ಶಿಕ್ಷಣ ಸಂಯೋಜಕರು, ಸಂಪನ್ಮೂಲ ವ್ಯಕ್ತಿಗಳು ಹಾಗೂ ಬಿ.ಎಲ್.ಎಂ.ಟಿ. ಇವರೆಲ್ಲರಿಗೂ ಮೇಲ್ಕಂಡ ಸ್ಪರ್ದೆಗಳ ಬಗ್ಗೆ ಸೂಕ್ತ ಮಾರ್ಗದರ್ಶನ ಮತ್ತು ತರಬೇತಿಯನ್ನು ನೀಡುವುದು. .

(ಎ) ಪ್ರತಿ ಶೈಕ್ಷಣಿಯ ಸಂಸ್ಥೆಯ ಮುಖ್ಯಸ್ಥರು/ಪ್ರಾಂಶುಪಾಲರು ತಮ್ಮ ಶಾಲೆ/ ಕಾಲೇಜಿನ ಇ.ಎಲ್.ಸಿ.ಯನ್ನು ಭಾರತ ಚುನಾವಣಾ ಆಯೋಗದ ಅಂತರ್ಜಾಲದಲ್ಲಿ ನೋಂದಾಯಿಸಿ ಸಂಪನ್ಮೂಲ ಸಾಹಿತ್ಯ ಮಾರ್ಗದರ್ಶಿಯಲ್ಲಿರುವ ಎಲ್ಲಾ ಚಟುವಟಿಕೆಗಳನ್ನು ಮಾಸಿಕವಾಗಿ ಮಕ್ಕಳ/ಯುವ ಮತದಾರರಲ್ಲಿ ಚುನಾವಣೆ ಮತ್ತು ಮತದಾನದ ಬಗ್ಗೆ ಅರಿವು ಮೂಡಿಸುವ ಇಎಲ್‌ಸಿ ಚಟುವಟಿಕೆಗಳನ್ನು ಇಎಲ್‌ಸಿ ಸಂಚಾಲಕರು ಪ್ರತಿ ತರಗತಿಯ/ವಿಭಾಗದ ವಿದ್ಯಾರ್ಥಿ/ನಿಯರಿಗೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದರ ಬಗ್ಗೆ ಮೇಲ್ವಿಚಾರಣೆ ಮತ್ತು ಉಸ್ತುವಾರಿ ಮಾಡುವುದು. ಅಲ್ಲದೆ ಮೇಲ್ಕಂಡ ಸ್ಪರ್ದೆಗಳ ಬಗ್ಗೆ ಸೂಕ್ತ ಮಾರ್ಗದರ್ಶನ ಮತ್ತು ತರಬೇತಿಯನ್ನು ನೀಡುವುದು.

(ಏ) ಇಎಲ್‌ಸಿ ಮತ್ತು ಸಿಜೆಸಿ ಸಂಚಾಲಕರು ತಮ್ಮ ತಮ್ಮ ವ್ಯಾಪ್ತಿಯ ಶಾಲೆ/ಕಾಲೇಜುಗಳಲ್ಲಿ ಹಾಗೂ ಬೂತ್ ಹಂತದಲ್ಲಿ ಇರುವ ಇಎಲ್‌ಸಿ/ಸಿಜೆಸಿಗಳನ್ನು ಭಾರತ ಚುನಾವಣಾ ಆಯೋಗದ ಅಂತರ್ಜಾಲದಲ್ಲಿ ನೋಂದಾಯಿಸಿ, ವಿದ್ಯಾರ್ಥಿ/ನಿಯರಿಗೆ, ಯುವ ಮತ್ತು ಭವಿಷ್ಯ ಮತದಾರರಿಗೆ ಸಂಪನ್ಮೂಲ ಮಾರ್ಗದರ್ಶಿ ಸಾಹಿತ್ಯಗಳ ಮಾರ್ಗಸೂಚಿಗಳನ್ವಯ ಇಎಲ್‌ಸಿ ಕಾರ್ಯ ಚಟುವಟಿಕೆಗಳನ್ನು ಮಾಸಿಕವಾಗಿ ಕೈಗೊಂಡು ಶೇಕಡ 100 ರಷ್ಟು ಪ್ರಗತಿ ಸಾಧಿಸಲು ಕ್ರಮವಹಿಸುವುದು.

ವಿಶೇಷವಾಗಿ ಎನ್.ವಿ.ಡಿ ಸ್ಪರ್ಧೆಗಳನ್ನು ಪರಿಣಾಮಕಾರಿಯಾಗಿ ಅಯೋಜಿಸಲು ಅಗತ್ಯ ಪೂರ್ವಸಿದ್ಧತೆಯೊಂದಿಗೆ ಕ್ರಮವಹಿಸುವುದು.

**ಸೂಚನೆ:-**

ಎಲ್ಲಾ ಹಂತದ ಉಸ್ತುವಾರಿ ಅಧಿಕಾರಿಗಳು ಸೂಚಿತ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಗೊಳಿಸುವುದು ಹಾಗೂ ಭೇಟಿಯ ಸಮಯದಲ್ಲಿ ಪರಿಶೀಲಿಸಿ, ಸಂದರ್ಶನ ವರದಿಯಲ್ಲಿ ನಮೂದಿಸುವುದು ಮತ್ತು ಇಎಲ್‌ಸಿ/ಸಿಜೆಸಿ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ, ಪೂರ್ಣಪ್ರಮಾಣದಲ್ಲಿ ಯಶಸ್ವಿಗೊಳಿಸಲು ಕ್ರಮವಹಿಸುವುದು.

**9. ದಾಖಲೀಕರಣ:-**

ಶಾಲೆ/ಕಾಲೇಜು ಇಎಲ್‌ಸಿ ಕೇಂದ್ರಗಳು ಸೇರಿದಂತೆ, ಎಲ್ಲಾ ಹಂತಗಳಲ್ಲಿ ನಿರ್ವಹಿಸುವ ಕಾರ್ಯಚಟುವಟಿಕೆಗಳು ಮತ್ತು ಸ್ಪರ್ಧೆಗಳಿಗೆ ಸಂಬಂಧಿಸಿದಂತೆ ಆಯ್ದ ಅತ್ಯುತ್ತಮ ಗುಣಮಟ್ಟದ ಛಾಯಾಚಿತ್ರಗಳು, ದಿನಪತ್ರಿಕೆ/ಮಾಸಪತ್ರಿಕೆಗಳ ತುಣುಕುಗಳನ್ನು ಸಂಬಂಧಿಸಿದ ಸೂಕ್ತ ಅಡಿಬರಹದೊಂದಿಗೆ ಇಮೇಲ್‌ನಲ್ಲಿ ಮಾತ್ರ ಸಂಕ್ಷಿಪ್ತ ವರದಿಯನ್ನು (ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ) ಒಂದು ಪುಟ ಸಿದ್ಧಪಡಿಸಿ **Word Document** ನಲ್ಲಿ consveep@gmail.com ಇ-ಮೇಲ್ ವಿಳಾಸಕ್ಕೆ ಕಳುಹಿಸುವುದು.

**10. ಅನುಪಾಲನಾ ಕ್ರಮಗಳು:-**

ಆಯೋಗದ ವತಿಯಿಂದ ಕಾಲಕಾಲಕ್ಕೆ ಸಂಪನ್ಮೂಲ ವ್ಯಕ್ತಿಗಳು, ಉಸ್ತುವಾರಿ ಅಧಿಕಾರಿಗಳ ಸಭೆ, ವಿಡಿಯೋ ಕಾನ್ಫರೆನ್ಸ್‌ಗಳ ಮೂಲಕ ಸಮಾಲೋಚನೆ ನಡೆಸಿ, ಅಗತ್ಯ ಅನುಪಾಲನೆಗೆ ಕ್ರಮವಹಿಸಲಾಗುವುದು.

**11. ನಿಯತ ಕಾಲಿಕ ವರದಿ ಸಲ್ಲಿಸುವಿಕೆ:-**

ಇಎಲ್‌ಸಿ/ಸಿಜೆಸಿ ಕಾರ್ಯಚಟುವಟಿಕೆಗಳ ಅನುಷ್ಠಾನ ಮತ್ತು ಪ್ರಗತಿಗೆ ಸಂಬಂಧಿಸಿದಂತೆ, ಇಎಲ್‌ಸಿ ಗೂಗಲ್ ಸ್ಪ್ರೆಡ್‌ಷೀಟ್/ಎಕ್ಸೆಲ್ ನಿಗದಿತ ನಮೂನೆಗಳಲ್ಲಿ **ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಕಡ್ಡಾಯವಾಗಿ ಮಾಹಿತಿಯನ್ನು ಸಲ್ಲಿಸುವುದು.**

**(ಪ್ರಿಯಾಂಕ ಮೇರಿ ಫ್ರಾನ್ಸಿಸ್) ಭಾ.ಆ.ಸೇ.,**
**ಅಪರ ಮುಖ್ಯ ಚುನಾವಣಾಧಿಕಾರಿಗಳು**
**ಸಿಆಸುಇ ಚುನಾವಣೆಗಳು**

**ಪ್ರತಿಯನ್ನು ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ:-**

1. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಮಾನ್ಯ ಕುಲಪತಿಗಳು,
2. ಮಾನ್ಯ ಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
3. ಮಾನ್ಯ ಕುಲಪತಿಗಳು, ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ, ಬೆಂಗಳೂರು
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ
5. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ.
6. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರ 18ನೇ ಸಂಪಿಗೆ ರಸ್ತೆ, ಬೆಂಗಳೂರು
7. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು,

8. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು,
9. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ,
10. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
11. ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಆಯುಕ್ತರು ಬಿಬಿಎಂಪಿ ಬೆಂಗಳೂರು
12. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರಗಿ,
13. ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು,
14. ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಸ್ವೀಪ್ ನೋಡಲ್ ಅಧಿಕಾರಿಗಳು,
15. ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು [ಪ್ರಾಥಮಿಕ ಶಿಕ್ಷಣ] [ಪ್ರೌಢಶಿಕ್ಷಣ] ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಮತ್ತು ಡಿ.ಎಸ್.ಇ.ಆರ್.ಟಿ. ಹಾಗೂ ವಿಭಾಗೀಯ ಇಎಲ್‌ಸಿ ನೋಡಲ್ ಅಧಿಕಾರಿಗಳು,
16. ನಿರ್ದೇಶಕರು, ಅಪರ ಆಯುಕ್ತಾಲಯ, ಕಲಬುರಗಿ ಮತ್ತು ಧಾರವಾಡ. ಹಾಗೂ ವಿಭಾಗೀಯ ಇಎಲ್‌ಸಿ ನೋಡಲ್ ಅಧಿಕಾರಿಗಳು,
17. ಸಹನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಮಂಡಳಿ, ಬೆಂಗಳೂರು
18. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ,
19. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳು.
20. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು [ಆಡಳಿತ] ಮತ್ತು [ಅಭಿವೃದ್ಧಿ] ಸಾರ್ವಜನಿಕ ಶಿಕ್ಷಣ ಇಲಾಖೆ,
21. ಎಲ್ಲಾ ತಹಸೀಲ್ದಾರರು, ಕಂದಾಯ ಇಲಾಖೆ, ಕರ್ನಾಟಕ ರಾಜ್ಯ,
22. ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ,
23. ಕಛೇರಿ ಪ್ರತಿ/ರಕ್ಷಾ ಕಡತಕ್ಕೆ.

**ಕಛೇರಿ ಸುತ್ತೋಲೆ ಸಂಖ್ಯೆ: ಸಿಆಸುಇ/13/SVEEP/2022, ದಿನಾಂಕ: 23ನೇ ಜೂನ್ 2022ರ ಅನುಬಂಧ-02**

| ಕ್ರ.ಸಂ | ಹಂತ | ಸ್ಪರ್ಧೆಯ ವಿವರ | ಅವಧಿ |
|---|---|---|---|
| 1 | ಎಲ್ಲಾ ಹಂತಗಳು (ಪ್ರೌಢ/ ಪದವಿ ಪೂರ್ವ/ ಪದವಿ ಪ್ರತ್ಯೇಕ) | ನಾಟಕ ಪ್ರದರ್ಶನ [ಓಟು ಹಾಕೋಣ ಬನ್ನಿ] School Play/ Skit | • ಶಾಲೆ/ಸಂಸ್ಥೆ ಹಂತದ ಸ್ಪರ್ಧೆಗಳನ್ನು ಸೆಪ್ಟಂಬರ್ ಕೊನೆಯ ವಾರದಲ್ಲಿ ನಿರ್ವಹಿಸುವುದು<br>• ಬ್ಲಾಕ್ ಹಂತದಲ್ಲಿ ಈ ಸ್ಪರ್ಧೆಗಳನ್ನು ಅಕ್ಟೋಬರ್ ಕೊನೆಯ ವಾರದಲ್ಲಿ ನಿರ್ವಹಿಸುವುದು<br>• ಜಿಲ್ಲಾ ಹಂತದಲ್ಲಿ ಈ ಸ್ಪರ್ಧೆಗಳನ್ನು ನವೆಂಬರ್ ಮೊದಲ ವಾರದಲ್ಲಿ ಆಯೋಜಿಸುವುದು ಮತ್ತು ನವೆಂಬರ್ 14 ರ ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ ಆಯಾ ಹಂತದ ವಿಜೇತರಿಗೆ ಆಯಾ ಹಂತದಲ್ಲಿ ಬಹುಮಾನ/ಪ್ರಶಸ್ತಿಪತ್ರ ವಿತರಣೆಗೆ ಅಗತ್ಯ ಕ್ರಮವಹಿಸುವುದು.<br>• ರಾಜ್ಯ ಮಟ್ಟದ ಸ್ಪರ್ಧೆಗಳನ್ನು ಡಿಸೆಂಬರ್ ಮಾಹೆಯಲ್ಲಿ ನಿರ್ವಹಿಸಲಾಗುವುದು ಮತ್ತು ವಿಜೇತ ಸ್ಪರ್ಧಿಗಳಿಗೆ ಜನವರಿ 25, 2023 ರ 'ರಾಷ್ಟ್ರೀಯ ಮತದಾರರ ದಿನಾಚರಣೆ' ಸಂದರ್ಭದಲ್ಲಿ ಬಹುಮಾನ/ಪ್ರಶಸ್ತಿಪತ್ರ ವಿತರಣೆಮಾಡಲಾಗುವುದು. |
| 2 | ಪ್ರೌಢ ಶಾಲೆ | 1) ಪ್ರಬಂಧ ಸ್ಪರ್ಧೆ<br>2) ಕ್ವಿಜ್ | |
| 3 | ಚಿತ್ರಕಲಾ ಶಾಲೆಗಳು [Art School] | 3) ಚಿತ್ರಕಲೆ ಮತ್ತು ಪೋಸ್ಟರ್ಸ್ ಮಾಡುವುದು | |
| 4 | ಪದವಿ ಪೂರ್ವ/ ತತ್ಸಮಾನ ವಿದ್ಯಾಲಯಗಳು | 1) ಚರ್ಚಾಸ್ಪರ್ಧೆ<br>2) ಪ್ರಬಂಧ ಸ್ಪರ್ಧೆ<br>3) ಕ್ವಿಜ್ | |
| 5 | ಪದವಿ/ತತ್ಸಮಾನ ವಿದ್ಯಾಲಯಗಳು/ ವಿಶ್ವವಿದ್ಯಾಲಯಗಳು | 1) ಚರ್ಚಾಸ್ಪರ್ಧೆ<br>2) ಪ್ರಬಂಧ ಸ್ಪರ್ಧೆ<br>3) ಕ್ವಿಜ್ | |

ಮುಖ್ಯ ಚುನಾವಣಾಧಿಕಾರಿಯವರ ಕಛೇರಿ, ಕರ್ನಾಟಕ

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560 001.

---

ಸಂಖ್ಯೆ: ಸಿಆಸುಇ/17/SVEEP/2022 ದಿನಾಂಕ: 17-09-2022

ಇವರಿಗೆ

1) ಮುಖ್ಯ ಆಯುಕ್ತರು ಹಾಗೂ ಜಿಲ್ಲಾ ಚುನಾವಣಾಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
2) ರಾಜ್ಯದ ಎಲ್ಲಾ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳು.
3) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
ಹಾಗೂ ಜಿಲ್ಲಾ SVEEP ನೋಡಲ್ ಅಧಿಕಾರಿಗಳು
4) ಅಪರ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಅಪರ ಆಯುಕ್ತರು-ಬಿ.ಬಿ.ಎಂ.ಪಿ
(ಕೇಂದ್ರ/ಉತ್ತರ/ದಕ್ಷಿಣ)
5) ಅಪರ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ.

ಮಾನ್ಯರೆ...

**ವಿಷಯ:** ಯುವ ಮತದಾರರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡುವ ಸಂಬಂಧ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಒದಗಿಸುವ ಬಗ್ಗೆ.

**ಉಲ್ಲೇಖ:** 1) ಈ ಕಛೇರಿಯ ಇದೇ ಕ್ರಮಾಂಕದ ಪತ್ರ ಸಂಖ್ಯೆ, ದಿನಾಂಕ: 08-09-2022.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ 18 ವರ್ಷ ಪೂರೈಸಿದ ಎಲ್ಲಾ ಯುವ ಜನತೆಯನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡುವ ಸಂಬಂಧ ಕ್ರಮ ಕೈಗೊಳ್ಳುವಂತೆ ನಿರ್ದೇಶನಗಳನ್ನು ನೀಡಿರುತ್ತದೆ. ಉಲ್ಲೇಖದ ಪತ್ರದಲ್ಲಿ ಉನ್ನತಾಧಿಕಾರಿಗಳ ಸಭೆ ನಡೆಸಿ ಚರ್ಚಿಸಿ ತೀರ್ಮಾನಿಸಿದಂತೆ ಪ್ರಸ್ತುತ ಕಾಲೇಜು ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಿರುವ ಬಗ್ಗೆ ಖಾತ್ರಿಪಡಿಸುವುದು ಹಾಗೂ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡುವಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ಧರಿಸಲಾಗಿರುತ್ತದೆ.

ಈ ಸಂಬಂಧ ಸಂಬಂಧಪಟ್ಟ ಕಾಲೇಜು/ಸಂಸ್ಥೆಯ ಮುಖ್ಯಸ್ಥರ ಹೆಸರು, ಸಹಿ ಮತ್ತು ಮೊಹರಿನೊಂದಿಗೆ ನಮೂನೆ-(1) ರಲ್ಲಿ ಮಾಹಿತಿಯನ್ನು ಪಡೆಯುವುದು, ನಮೂನೆ-(2) ರಲ್ಲಿ ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ ರವರು ಎಲ್ಲಾ ಕಾಲೇಜುಗಳ/ಸಂಸ್ಥೆಗಳ ಮಾಹಿತಿಯನ್ನು ಕ್ರೋಢೀಕರಿಸುವುದು ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳು ಎಲ್ಲಾ ತಾಲ್ಲೂಕುವಾರು ಮಾಹಿತಿಯನ್ನು ನಮೂನೆ-(3) ರಲ್ಲಿ ಕ್ರೋಢೀಕರಿಸುವುದು, ಹಾಗೂ ಸಹಿ ಮತ್ತು ಮೊಹರಿನೊಂದಿಗೆ ದಿನಾಂಕ:27-09-2022 ರೊಳಗೆ consvccp@gmail.comಗೆ ಕಳುಹಿಸಲು ತಿಳಿಸಿದೆ.

(ಉಲ್ಲೇಖಿತ ಪತ್ರ ಹಾಗೂ ನಿಗದಿತ ನಮೂನೆಗಳನ್ನು ಇದರೊಂದಿಗೆ ಅಡಕಗೊಳಿಸಿದೆ)

ತಮ್ಮ ವಿಶ್ವಾಸಿ

(ಡಿ. ಶಂಭು ಭಟ್)
ಜಂಟಿ ಮುಖ್ಯ ಚುನಾವಣಾಧಿಕಾರಿ
ಸಿ.ಆ.ಸು.ಇ(ಚುನಾವಣೆಗಳು)

FORMAT-1

E-Roll Format-I (To be filled by Head of the Institution)

District--                                                                 Taluk--

Name & Address of the PU College --

| Sl.No | Name of the Student | Student Enrolled as Voters Y/N | Student Pending for enrollment Y/N | Student attending 18Yrs of Age as on 1st Jan Y/N | whether From 6 collected and digitized | Remarks If, not specify Resason. |
|---|---|---|---|---|---|---|
| [1] | [2] | [3] | [4] | [5] | [6] | [7] |
| 1 | | | | | | |
| 2 | | | | | | |
| 3 | | | | | | |
| 4 | | | | | | |
| 5 | | | | | | |
| 6 | | | | | | |
| 7 | | | | | | |
| 8 | | | | | | |
| 9 | | | | | | |
| 10 | | | | | | |
| 11 | | | | | | |
| 12 | | | | | | |
| 13 | | | | | | |
| 14 | | | | | | |
| 15 | | | | | | |
| 16 | | | | | | |
| 17 | | | | | | |
| 18 | | | | | | |
| 19 | | | | | | |
| 20 | | | | | | |
| 21 | | | | | | |
| 22 | | | | | | |
| 23 | | | | | | |
| 24 | | | | | | |
| 25 | | | | | | |
| 26 | | | | | | |
| 27 | | | | | | |
| 28 | | | | | | |
| 29 | | | | | | |
| 30 | | | | | | |

As it is related to the Electoral Process I am aware of the relevant Electoral Laws and provisions of Election Commission of India. I have verified the above information and certify that above information is correct.

Name, Signature, Seal of Head of the Institution

FORMAT-2

E-Roll Format-II (To be filled by Tehsildar of Respective Taluks)

Name of the Taluk-->

TALUK

| Sl. No | Name of the Institution | Total No.of Students | No.of Student Enrolled as Voters | No.of Student Pending for enrollment | No.of Students attending 18Yrs of Age as on 1st Jan | Out of Column [5] how many form 6 collected and digitized | **Remarks** Reasons for difference between column [5] & [6] |
|---|---|---|---|---|---|---|---|
| | [1] | [2] | [3] | [4] | [5] | [6] | [7] |
| 1 | | | | | | | |
| 2 | | | | | | | |
| 3 | | | | | | | |
| 4 | | | | | | | |
| 5 | | | | | | | |
| 6 | | | | | | | |
| 7 | | | | | | | |
| 8 | | | | | | | |
| 9 | | | | | | | |
| 10 | | | | | | | |
| 11 | | | | | | | |
| 12 | | | | | | | |
| 13 | | | | | | | |
| 14 | | | | | | | |
| 15 | | | | | | | |
| 16 | | | | | | | |
| 17 | | | | | | | |
| 18 | | | | | | | |
| 19 | | | | | | | |
| 20 | | | | | | | |
| 21 | | | | | | | |
| 22 | | | | | | | |
| 23 | | | | | | | |
| 24 | | | | | | | |
| 25 | | | | | | | |
| 26 | | | | | | | |
| 27 | | | | | | | |
| 28 | | | | | | | |
| 29 | | | | | | | |
| 30 | | | | | | | |

Date:

Tehsildar Signature

Taluk Office:

| FORMAT-3 | | | | | | | |
|---|---|---|---|---|---|---|---|
| E-Roll Format-III (To be filled by Concerned DEO of the District) | | | | | | | |
| DISTRICT | | | | | | | |
| Sl. No | Name of the Taluk | Total No.of Institution | Total No.of Students | No.of Student Enrolled as Voters | No.of Student Pending for enrollment | No.of Student attending 18Yrs of Age as on 1st Jan | Out of column [6] how many Form 6 collected and digitized |
| | [1] | [2] | [3] | [4] | [5] | [6] | [7] |
| 1 | | | | | | | |
| 2 | | | | | | | |
| 3 | | | | | | | |
| 4 | | | | | | | |
| 5 | | | | | | | |
| 6 | | | | | | | |
| 7 | | | | | | | |
| 8 | | | | | | | |
| 9 | | | | | | | |
| 10 | | | | | | | |
| 11 | | | | | | | |
| 12 | | | | | | | |
| 13 | | | | | | | |
| 14 | | | | | | | |
| 15 | | | | | | | |
| 16 | | | | | | | |
| 17 | | | | | | | |
| 18 | | | | | | | |
| 19 | | | | | | | |
| 20 | | | | | | | |
| 21 | | | | | | | |
| 22 | | | | | | | |
| 23 | | | | | | | |
| 24 | | | | | | | |
| 25 | | | | | | | |
| 26 | | | | | | | |
| 27 | | | | | | | |
| 28 | | | | | | | |
| 29 | | | | | | | |
| 30 | | | | | | | |

Date

Name and Seal of DEO.

District: